

# ಸರ್ಜರಿಗೆ ಸಜ್ಜಾಗುವುದು ಹೇಗೆ?

■ ಡಾ. ಶ್ರೀನಿವಾಸ ಹರಪನಹಳ್ಳಿ

**ಸರ್ಜರಿ ಎಂದರೆ ಎಲ್ಲರಿಗೂ ಆತಂಕ, ಭಯ ಸಹಜ. ಇದನ್ನು ಮಾಡುವ ಮುನ್ನ ಹಲವು ಪರೀಕ್ಷೆಗಳನ್ನು ಮಾಡಿಸಬೇಕಾಗುತ್ತದೆ. ಕೆಲವೊಂದು ಶಸ್ತ್ರಚಿಕಿತ್ಸೆ ರೋಗಿಯ ಸಮಸ್ಯೆಗೆ ಶಾಶ್ವತ ಪರಿಹಾರವನ್ನೂ ಕೊಡಬಹುದು. ಹಾಗಾದರೆ ಸರ್ಜರಿಗೆ ಸಜ್ಜಾಗುವುದು ಹೇಗೆ?**

ನನ್ನ ಪರಿಚಯದವರೊಬ್ಬರು ಒಂದು ತಿಂಗಳ ಹಿಂದೆ ಫೋನ್ ಮಾಡಿ 'ನನ್ನ ಸಂಬಂಧಿಯೊಬ್ಬನಿಗೆ ಕಿಡ್ನಿ ಕಸಿ ಮಾಡಬೇಕಿದೆ. ಅದಕ್ಕಾಗಿ ಅವನ ವೈದ್ಯರು ತರಹೇವಾರಿ ಟೆಸ್ಟ್‌ಗಳ ಜೊತೆ ಪೊಲೀಸರೊಂದಿಗೆ ಹಾಗೂ ಲಾಯರೊಂದಿಗೆ ಸಮಾಲೋಚಿಸಬೇಕು ಎಂದಿದ್ದಾರೆ. ಇಷ್ಟೆಲ್ಲಾ ಬೇಕಾ' ಎಂದರು.

ನಾನು 'ಏನು ಕಾಯಿಲೆ, ಯಾವಾಗ ಹೇಳಿದರು?' ಎಂದು ಕೇಳಿದೆ.

ಅದಕ್ಕವರು 'ಆ ಹುಡುಗನಿಗೆ ಕಿಡ್ನಿ ಫೇಲಾಗಿ ಸುಮಾರು ಒಂದೂವರೆ ವರ್ಷವಾಯಿತು. ಕಳೆದ ಎಂಟುಹತ್ತು ತಿಂಗಳಿಂದ ಡಯಾಲಿಸಿಸ್ ಕೂಡ ನಡಿತಾ ಇದೆ. ಅವನ ತಾಯಿ ಅವನಿಗೆ ಕಿಡ್ನಿ ಕೊಡಬಹುದಂತೆ. ಆದರೆ ಅದಕ್ಕಾಗಿ ಇಷ್ಟೆಲ್ಲಾ ತಪಾಸಣೆ ಬೇಕೇ? ಎಂದರು.

ನಾನು 'ಕಿಡ್ನಿ ಕಸಿ ಒಂದು ಕ್ಲಿಷ್ಟಕರ ಸರ್ಜರಿ. ಅದಕ್ಕೆ ಅನೇಕ ತಪಾಸಣೆಗಳ ಜೊತೆ ಕಾನೂನಾತ್ಮಕ ಸಲಹೆ ಕೂಡ ಬೇಕು. ಯಾವುದಕ್ಕೂ ಒಮ್ಮೆ ನಾನೇ ಡಾಕ್ಟರ್ ಜೊತೆ ಮಾತನಾಡಿ ತಮಗೆ ತಿಳಿಸುತ್ತೇನೆ' ಎಂದೆ.

ಇದು ಕೇವಲ ಇವರೊಬ್ಬರ ಸಮಸ್ಯೆಯಲ್ಲ. ಅನೇಕ ರೋಗಿಗಳು ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತೆ ಎಂದಾಕ್ಷಣ ಅಧೀರರಾಗುತ್ತಾರೆ. ಶಸ್ತ್ರಚಿಕಿತ್ಸೆಗೆ ಒಳಪಡುವ ಮುನ್ನ ವೈದ್ಯರು ಸೂಚಿಸುವ ಪರೀಕ್ಷೆಗಳ ಬಗ್ಗೆ ಗೊಂದಲಕ್ಕೀಡಾಗುತ್ತಾರೆ. ಇಷ್ಟೆಲ್ಲಾ ಯಾಕೆ ಬೇಕು? ನೇರವಾಗಿ ಸರ್ಜರಿ ಮಾಡಬಾರದೇ ಅಥವಾ ಕೆಲ ಮಾತ್ರೆ-ಇಂಜೆಕ್ಷನ್ ಕೊಟ್ಟುಬಿಡಬಾರದೇ ಎಂದು ಆಲೋಚಿಸುತ್ತಾರೆ. ಆದ್ದರಿಂದ ಶಸ್ತ್ರಚಿಕಿತ್ಸೆಗೆ ಮುನ್ನ ಬೇಕಾಗುವ ಪರೀಕ್ಷೆಗಳೇನು? ಈ ಪರೀಕ್ಷೆಗಳಿಂದ ಆಗುವ ಲಾಭವೇನು? ಎಂದು ತಿಳಿದುಕೊಳ್ಳುವುದು ಉತ್ತಮ. ಇದರ ಜೊತೆ ಶಸ್ತ್ರಚಿಕಿತ್ಸೆ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳೇನು ಎಂದು ತಿಳಿದುಕೊಳ್ಳುವುದೂ ತುಂಬಾ ಅವಶ್ಯಕ.

ರೋಗಿಗಳಿಗೆ ವೈದ್ಯರು ನೀಡಬಹುದಾದ ವಿವಿಧ ತರದ ಚಿಕಿತ್ಸೆಗಳಲ್ಲಿ ಶಸ್ತ್ರಚಿಕಿತ್ಸೆಯೂ (ಆಪರೇಷನ್) ಒಂದು. ಇದರಲ್ಲಿ ರೋಗಿಯ ತೊಂದರೆಗೆ ಕಾರಣವಾಗಿರುವ ದೇಹದ ಒಂದು ಭಾಗಕ್ಕೆ ಅಥವಾ ಅಂಗಕ್ಕೆ ಶಸ್ತ್ರಕ್ರಿಯೆ ನಡೆಸಿ ಅಲ್ಲಿನ ರೋಗವನ್ನು ಕಿತ್ತೊಗೆಯುತ್ತಾರೆ. ಕೆಲಸಂಧರ್ಭಗಳಲ್ಲಿ ಊನಗೊಂಡ ಭಾಗಕ್ಕೆ ಇನ್ನೊಂದು ಭಾಗವನ್ನೋ, ಅಂಗವನ್ನೋ ಜೋಡಿಸುವುದು ಕೂಡ ಉಂಟು. ನೆತ್ತಿಯಿಂದ ಹಿಡಿದು ಉಂಗುಷ್ಟದವರೆಗೆ ನೂರಾರು ವಿಧದ ಶಸ್ತ್ರಚಿಕಿತ್ಸೆಗಳನ್ನು ಮಾಡಬಹುದು! ಪ್ರತಿಯೊಂದು ಶಸ್ತ್ರಚಿಕಿತ್ಸೆಗೂ ಅದರದ್ದೇ ಆದ ನೈಪುಣ್ಯತೆ, ಉಪಕರಣಗಳು ಹಾಗೂ ತಂತ್ರಜ್ಞಾನ ಇವೆ.

ಈ ಶಸ್ತ್ರಚಿಕಿತ್ಸೆಗಳನ್ನು ಸಾಮಾನ್ಯವಾಗಿ ಚಿಕ್ಕ, ಮಧ್ಯಮ ಹಾಗೂ ಬೃಹತ್ ಶಸ್ತ್ರಚಿಕಿತ್ಸೆಗಳೆಂದು ವಿಂಗಡಿಸಬಹುದು. ಉದಾಹರಣೆಗೆ ಗಾಯಕ್ಕೆ ಒಂದೆರಡು ಹೊಲಿಗೆ ಹಾಕುವುದು, ಚಿಕ್ಕ ಗಡ್ಡೆಗಳನ್ನು ತೆಗೆಯುವುದು ಸರಳ, ಚಿಕ್ಕ ಶಸ್ತ್ರಚಿಕಿತ್ಸೆಯಾದರೆ, ಹೃದಯ, ಶ್ವಾಸಕೋಶ, ಮೆದುಳು ಇನ್ನಿತರೆ ಅತಿಮುಖ್ಯ ಅಂಗಗಳ ಶಸ್ತ್ರಚಿಕಿತ್ಸೆಗಳು, ಅಥವಾ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗಳನ್ನು ಬೃಹತ್ ಶಸ್ತ್ರಚಿಕಿತ್ಸೆಗಳೆನ್ನಬಹುದು. ಒಬ್ಬ ವಯಸ್ಕ, ಆರೋಗ್ಯವಂತ ವ್ಯಕ್ತಿಯು ಒಂದು ಸಣ್ಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಬಹುಶಃ ಯಾವುದೇ ರೀತಿಯ ಪರೀಕ್ಷೆಗಳ ಅಗತ್ಯವಿರುವುದಿಲ್ಲ. ಆದರೆ ಆ ವ್ಯಕ್ತಿಗೆ ದೊಡ್ಡ ಶಸ್ತ್ರಚಿಕಿತ್ಸೆ ಮಾಡಬೇಕಾಗಿ ಬಂದರೆ ಅಥವಾ ಆತನಿಗೆ ಇನ್ನಾವುದೇ ಕಾಯಿಲೆ ಇದ್ದಲ್ಲಿ ಆತ ಕೆಲ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ.

ಯಾವುದೇ ಕೆಲಸವಿರಲಿ ಅದಕ್ಕೆ ಬೇಕಾಗುವ ತಯಾರಿಯನ್ನು ಮಾಡಿಕೊಂಡ ಬಳಿಕವೇ ಮುಂದುವರೆಯಬೇಕು. ಪೂರ್ವ ತಯಾರಿ ಇಲ್ಲದೆ ಆರಂಭಿಸುವ ಯಾವುದೇ ಕೆಲಸ ನಮ್ಮನ್ನು ಇಕ್ಕಟಟಿನಲ್ಲಿ ಸಿಕ್ಕಿಹಾಕಿಸಬಹುದು. ಅದೇ ರೀತಿ ವೈದ್ಯರೂ ಕೂಡ ಒಬ್ಬ ರೋಗಿಗೆ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಿದಾಗ ಆ ಶಸ್ತ್ರಚಿಕಿತ್ಸೆಯಲ್ಲಿ ಉಂಟಾಗುವ ಸವಾಲುಗಳೇನು? ರೋಗಿಯು ಶಸ್ತ್ರಚಿಕಿತ್ಸೆಯನ್ನು ಸಹಿಸಬಲ್ಲನೆ? ಎಂದು ಗಹನವಾಗಿ ಚಿಂತಿಸಬೇಕಾಗುತ್ತದೆ. ಈ ಪ್ರಶ್ನೆಗಳಿಗೆ